

ವಿಜಯಕುಮಾರ್ ಎಂ
ಕನ್ನಡ ಉಪನ್ಯಾಸಕರು

# ಮೌನ ಮಾತಾದಾಗ

**ಸರ್ವ ಸ್ವರ್ಗರಾಣಿ ಕುಲಬಾಂಧವರಿಗೂ ನನ್ನ ಅನಂತ ಪ್ರಣಾಮಗಳು**

ದಾನ ದಾನಗಳಿಗಿಂತ ಶ್ರೇಷ್ಠದಾನ ವಿದ್ಯಾದಾನ "ನಹಿ ಜ್ಞಾನೇನ ಸದೃಶಂ" ಜ್ಞಾನಕ್ಕಿಂತ ಮಿಗಿಲಾದುದು ಬೇರೊಂದಿಲ್ಲ ಎಂಬ ಅಣಿಮುತ್ತುಗಳಂತೆ ಯಾವುದೇ ರೀತಿಯ ಸ್ವಾರ್ಥತತೆ, ಧರ್ಮ ಪ್ರಚಾರತೆಯಿಲ್ಲದ, ಭಾವೈಕ್ಯತೆಯಿಂದ ಸಮಾಜದಲ್ಲಿ ಸುಶಿಕ್ಷಿತರನ್ನು ನಿರ್ಮಿಸುವಲ್ಲಿ ಸಮಾಜದ ಏಳಿಗೆಗಾಗಿ ಹಗಲಿರುಳೆನ್ನದೆ ಶ್ರಮಿಸುತ್ತಿರುವ ಸಂಸ್ಥೆ ಸ್ವರ್ಗರಾಣಿ ಎಂಬುದರಲ್ಲಿ ಯಾವುದೇ ರೀತಿಯ ಉತ್ಪ್ರೇಕ್ಷೆಯಿರಲಾರದು.

ನೀವು ನನ್ನ ಮಾತುಗಳನ್ನು ಕೇಳಿ, ಆ ಸಂಸ್ಥೆಯವರು ಅವರ ಸಂಸ್ಥೆಯ ಬಗ್ಗೆ ಹೊಗಳಿಕೊಳ್ಳುತ್ತಿದ್ದಾರೆ ಎಂದು ಭಾವಿಸಬಹುದು, ಆದರೆ ಈ ಸಂಸ್ಥೆಯಲ್ಲಿ ವಿದ್ಯೆಯನ್ನು ಕಲಿತ ವಿದ್ಯಾರ್ಥಿಗಳು ದೇಶ–ವಿದೇಶಗಳಲ್ಲಿ ತಮ್ಮ ಸೇವೆಗಳನ್ನು ಸಲ್ಲಿಸುತ್ತಿರುವುದೇ ಇದಕ್ಕೆ ಜೀವಂತ ಸಾಕ್ಷಿಯಾಗಿದೆ.

1997ರಲ್ಲಿ ಕೇವಲ 7 ವಿದ್ಯಾರ್ಥಿಗಳಿಂದ ಒಂದು ಬಾಡಿಗೆ ಮನೆಯಲ್ಲಿ ಪ್ರಾರಂಭವಾದ ಸಂಸ್ಥೆ ಇಂದು ಬಡಾವಣೆಯಲ್ಲಿ ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ಬೆಳೆಯುವುದಕ್ಕೆ ಮೂಲ ಕಾರಣವಾಗಿರುವುದು ತಾಯಿಬೇರು. ತಾಯಿಬೇರು ಎಷ್ಟು ಭದ್ರವಾಗಿರುತ್ತದೆಯೋ ಅಷ್ಟೇ ಸುಭದ್ರವಾಗಿ, ಹುಲುಸಾಗಿ, ರಸವತ್ತಾಗಿ ಮರ ಬೆಳೆಯುತ್ತದೆ. ಅಂದರೆ ಆಡಳಿತ ಮಂಡಳಿಯ ದಿಟ್ಟ ಹೆಜ್ಜೆ ಇಂದಿನ ಬೆಳ್ಳಿಹಬ್ಬವನ್ನು ಕಾಣಲು ಸಾಧ್ಯವಾಗಿದೆ ಎಂದರೆ ತಪ್ಪಾಗಲಾರದು.

ಆಲದ ಮರ ಹೇಗೆ ತನ್ನ ಕವಲುಗಳನ್ನು ಚಾಚಿ ಪ್ರತಿಯೊಂದು ಕವಲು ಬೇರೂರಿ ಹೆಮ್ಮರವಾಗಿ ಬೆಳೆದು ಬಳಲಿ ಬಂದವರಿಗೆ ನೆರಳು ನೀಡುತ್ತದೆಯೋ ಹಾಗೆಯೇ ನಾ ಕಂಡಂತೆ ಸ್ವರ್ಗರಾಣಿಯು ಸಹ ತಾನು ಬೆಳೆದು, ವಿದ್ಯಾರ್ಥಿಗಳನ್ನು ಬೆಳೆಸಿ, ಶಿಕ್ಷಕರನ್ನು ಪೋಷಿಸಿ, ಪೋಷಕರ ಮೆಚ್ಚುಗೆಗೆ ಆತ್ಮಗೌರವಕ್ಕೆ, ಏಳಿಗೆಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಸರ್ವರಿಗೂ ಮುದವನ್ನು ನೀಡಿ, ನೀಡುತ್ತ ನಿರಂತರವಾಗಿ ಶ್ರಮಿಸುತ್ತಿರುವ ಜೀವನದಿಯಾಗಿದೆ.

**ಬಿ.ವಿ.ಕಾರಂತರು** ಹೇಳುವಂತೆ ನಾವು ಯಾವುದೇ ಅಧಿಕಾರ, ಪ್ರಶಸ್ತಿ, ಪುರಸ್ಕಾರಗಳನ್ನು ಹುಡುಕಿಕೊಂಡು ಹೋಗಬಾರದು, ಅವು ನಮ್ಮನ್ನು ಹುಡುಕಿಕೊಂಡು ಬರುವಂತೆ ನಮ್ಮ ಕಾರ್ಯವೈಖರಿ ಇರಬೇಕೆನ್ನುವ ಮಾತಿನಂತೆ ಸ್ವರ್ಗರಾಣಿಯು ಕಳೆದ 25 ವರ್ಷಗಳ ಅವಿರತ ಸೇವೆ, ಪ್ರಾಮಾಣಿಕ ಪ್ರಯತ್ನದಿಂದ ಪ್ರಸ್ತುತದಲ್ಲಿ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ಬೆಳೆದು ಸಾವಿರಾರು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಾಕ್ಷಿಯಾಗಿದೆ ಎಂದರೆ ತಪ್ಪಾಗಲಾರದು.

**'ಪರೀಕ್ಷೆಗಳಿದ್ದಾಗ ನಿರೀಕ್ಷೆಗಳು ಹೆಚ್ಚಾಗುತ್ತವೆ'** ಎಂಬ ನಾಣ್ನುಡಿಯಂತೆ ನಮ್ಮ ಶಿಕ್ಷಣ ಸಂಸ್ಥೆಯು ಹಲವಾರು ಸನ್ನಿವೇಶಗಳಲ್ಲಿ ತಮ್ಮನ್ನು ತಾವು ಪರೀಕ್ಷೆಗೆ ಒಳಪಡಿಸಿಕೊಂಡು ಹೆಮ್ಮರವಾಗಿ ಬೆಳೆಯುತ್ತಾ ಬಂದಿರುವುದು ನಮ್ಮೆಲ್ಲರಿಗೂ ಜೀವಂತ ಸಾಕ್ಷಿಯಾಗಿದೆ. ಕೇವಲ ಸಂಸ್ಥೆಯೇ ಅಲ್ಲ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಸಹ ಇದಕ್ಕೆ ಹೊರತಾಗಿಲ್ಲ.

ವಿಶೇಷವಾಗಿ ಹೇಳುವುದಾದರೆ ನಮ್ಮ ಶಿಕ್ಷಣಸಂಸ್ಥೆಯು ಮಕ್ಕಳಲ್ಲಿರುವ/ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರಜ್ಞೆಯ ಸಾರಸತ್ವವನ್ನು ಗುರುತಿಸಿ ಹೊರಹಾಕುವ ಉದ್ದೇಶದಿಂದ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡುವುದರಲ್ಲಿ ಸ್ವರ್ಗರಾಣಿಯ ಕಾಳಜಿ ವರ್ಣನಾತೀತವಾದುದು.

ಅದರಲ್ಲಿಯೂ ನನ್ನನ್ನು ಮಂತ್ರ ಮುಗ್ಧನನ್ನಾಗಿಸಿರುವುದು ನಮ್ಮ ಶಿಕ್ಷಣಸಂಸ್ಥೆಯು ಕೈಗೊಳ್ಳುತ್ತಿರುವ ಸಾಮಾಜಿಕ ಸೇವಾ ಕಾರ್ಯತತ್ಪರತೆ. ಒಂದು ಸರ್ಕಾರಿ ಶಾಲೆಯನ್ನು ದತ್ತು ಪಡೆದುಕೊಂಡಿರುವುದು, ವೃದ್ಧಾಶ್ರಮಗಳಿಗೆ ಮತ್ತು ಅನಾಥಶ್ರಮಗಳಿಗೆ ಭೇಟಿ ನೀಡುತ್ತಿರುವುದು ಅತಿಗಮನೀಯ ವಿಚಾರವಾಗಿದೆ. ಒಂದೊಂದು ದಿನವನ್ನು ಅವರ ಜೊತೆ ಕೂಡಿ ಅವರ ನೋವು ನಲಿವುಗಳನ್ನು ಅರಿತು ಮಕ್ಕಳು ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸಿ ಕೊಳ್ಳುವಂತೆ ಮಾಡುವಲ್ಲಿ ಸ್ವರ್ಗರಾಣಿ ಸಂಸ್ಥೆಯ ಸೇವೆ ಅವಿಸ್ಮರಣೀಯವಾದುದು.

**ಶುದ್ಧ ವಸ್ತುವಿಗೆ ಶುದ್ಧಪಾತ್ರೆ ಬೇಕು.** ಅಂತೆಯೇ ವಿದ್ಯಾರ್ಥಿಗಳ ಮನಸ್ಸೆಂಬ ಪಾತ್ರೆಯಲ್ಲಿ ದ್ವೇಷ, ಅಸೂಯೆ, ಅಹಂಕಾರ, ಕೋಪ, ತಾಪಗಳೆಂಬ ಕೊಳಕನ್ನು ಹರಿಬಿಡದೆ ಪರಿಶುದ್ಧ ಮನಸ್ಕರರನ್ನಾಗಿ ಮಾಡುವ ಕ್ರಿಯೆ ನಿರಂತರವಾಗಿ ಸ್ವರ್ಗರಾಣಿ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು 'ದೀಪದ ಹಣತೆಯಲ್ಲಿ ಬತ್ತಿ ಹೇಗೆ ತಾನು ನೆನೆದು, ಸುಟ್ಟು ಜಗತ್ತಿಗೆ ಬೆಳಕು ನೀಡುತ್ತದೆಯೋ' ಹಾಗೆಯೇ ತಮ್ಮ ನಿಶ್ಕಲ್ಮಷ ಸೇವೆಗೈಯುತ್ತಿದ್ದಾರೆಂದರೆ ಅತಿಶಯೋಕ್ತಿಯಿಲ್ಲ.

ನನ್ನ ಪ್ರಕಾರವಾಗಿ ವಿದ್ಯೆಯೆಂಬ ಹಸಿವನ್ನು ಉಳ್ಳವರಿಗೆ ಸ್ವರ್ಗರಾಣಿ ಕಾಮಧೇನು / ಕಲ್ಪವೃಕ್ಷವಾಗಿದೆ ಎಂದರೆ ತಪ್ಪಾಗಲಾರದು.

ರಾಜರಾಜೇಶ್ವರಿತಾಯಿ ಹೇಗೆ ಈ ಬಡಾವಣೆಯಲ್ಲಿ ಭದ್ರವಾಗಿ ನೆಲೆಯೂರಿದ್ದಾಳೆಯೋ ಹಾಗೆಯೆ ಸ್ವರ್ಗರಾಣಿ ಸಂಸ್ಥೆಯು ಬೇರೂರಿ ಒಂದು ಕಡೆ ವಿದ್ಯೆಯನ್ನು ನೀಡುತ್ತ ಮತ್ತೊಂದು ಕಡೆ ಯಾವುದೇ ಜಾತಿ, ಧರ್ಮ, ಭಾಷೆಗಳ ಭೇದವಿಲ್ಲದೆ ನಾವೆಲ್ಲರೂ ಸ್ವರ್ಗರಾಣಿ ಕುಟುಂಬದವರೆಂಬ ಭಾವೈಕ್ಯತೆಯಿಂದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಸಂಸ್ಥೆಯು ಶತಮಾನೋತ್ಸವವನ್ನು ಸಹ ಕಾಣಲೆಂದು ಆಶಿಸುತ್ತೇನೆ.

**॥ ಸ್ವರ್ಗರಾಣಿ ಎನ್ನುವುದು ಜೀವನದಿ**
**ವಿದ್ಯಾರ್ಥಿಗಳು, ಶಿಕ್ಷಕರು ಎರಡು ಬದಿ ॥**

ಸಿಸ್ಟರ್.ಥಾಂಸಿನ್, ಸಿಸ್ಟರ್.ಇಮ್ಯಾಕ್ಯುಲೇಟ್ ಜೋಡಿಶಿಖರಗಳು
ಸಿಸ್ಟರ್. ಅಂಜನಾ ಉನ್ನತ ಧವಳಗಿರಿ
ಸಿಸ್ಟರ್.ಇನೋಸೆಂಟ್ ಪ್ರೀತಿಯ ವಿಸ್ತಾರದ ಬಯಲು
ಧುಮ್ಮಿಕ್ಕುವ ಸಿಸ್ಟರ್.ಅನಿ ಯೆಂಬ ಝರಿ
ಮೈಸೂರು ಮಲ್ಲಿಗೆ ಹಾರದಂತಹ ಸಿಸ್ಟರ್.ಟಾನಿಯ
ಬಿರುಗಾಳಿಗೂ ನಡುಗದ ಕಿರುಹಣತೆಯೆಂಬ ಸ್ವರ್ಗರಾಣಿ
ಬೆಂಬಲಕಿದೆ ಆಡಳಿತ ಮಂಡಳಿಯು ಜೋಡಿ.

**॥ ಸ್ವರ್ಗರಾಣಿ ಎನ್ನುವುದು ಜೀವನದಿ**
**ವಿದ್ಯಾರ್ಥಿಗಳು, ಶಿಕ್ಷಕರು ಎರಡು ಬದಿ ॥**